ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು  ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ – 973-2015

ಚಾಸಾ ಃ 2    ಪ್ರಾಸಾ ಃ 2

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು

ದಿನಾಂಕಃ 24-06-2019

ವಾಗ್ಮೂಲದವರ ಹೆಸರು ಃ ಲೋಕೇಶ್ ಕಾಂಚನ್
ಗಂಡನ ತಂದೆ ಹೆಸರು ಃ ಆನಂದ ಪುತ್ರನ್
ವಯಸ್ಸು ಃ 37 ವರ್ಷ
ಉದ್ಯೋಗ ಃ ಮಶೀನ್ ಸರ್ವಿಸ್
ವಾಸಸ್ಥಳ ಃ ಮಣೂರು ಪಡುಕೆರೆ , ಕುಂದಾಪುರ

ಮುಖ್ಯ  ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದಃ

ಸುಮಾರು 5 ವರ್ಷಗಳ ಹಿಂದೆ ನನ್ನ ತಂದೆಯವರು ಚಾಸಾ-1 ಅಂಗಡಿಗೆ ಸಾಮಾನು ತರಲು ಹೋದಾಗ ಅವರನ್ನು ಅಡ್ಡಗಟ್ಟಿ ಪ್ರಶಾಂತ್ ಮತ್ತು ಸುನೀಲ್ ಎಂಬುವವರು ನನ್ನ ತಂದೆಯ ಹತ್ತಿರ ಇದ್ದ ಚೈನನ್ನು ಕಿತ್ತುಕೊಂಡು ಓಡಿ ಹೋಗಿರುತ್ತಾರೆ.  ಆಗ ನನ್ನ ತಂದೆಗೆ ಗಾಯವಾಗಿದ್ದು ಅವರನ್ನು ನಾನು ತೆಕ್ಕಟ್ಟೆಯಲ್ಲಿಯ ಪ್ರೈಮಾ ಕ್ಲೀನಿಕ್‌ಗೆ ಕರೆದುಕೊಂಡು ಹೋದೆನು.  ಮರುದಿನ ಬೆಳಿಗ್ಗೆ ನನ್ನ ತಂದೆ ಕೋಟಾ ಪೋಲೀಸ್ ಠಾಣೆಗೆ ಈ ಬಗ್ಗೆ ದೂರನ್ನು ನೀಡಿರುತ್ತಾರೆ. ದೂರನ್ನು ನೀಡುವ ಸಂದರ್ಭದಲ್ಲಿ ಅನುಮಾನಾಸ್ಪದವಾಗಿ ನ್ಯಾಯಾಲಯದ ಮುಂದಿರುವಂತಹ ಆರೋಪಿಗಳ ಹೆಸರುಗಳನ್ನು ಗುಮಾನಿಯಾಗಿ ಹೇಳಿದ್ದೆವು .  ಮರುದಿನ ಬೆಳಿಗ್ಗೆ ಪೋಲೀಸರು  ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆಯನ್ನು ಜರುಗಿಸಿದರು.  ನನ್ನ ಸಹಿಯನ್ನು ಪೋಲೀಸರು ಠಾಣೆಯಲ್ಲಿ ಪಡೆದುಕೊಂಡಿರುತ್ತಾರೆ. ಈ ವಿಚಾರವಾಗಿ ನಾನು ಪೋಲೀಸರ ಮುಂದೆ ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಚಾಸಾ-1 ರವರ ಚಿನ್ನದ ಚೈನನ್ನು ಒಂದು ಸದ್ರಿ ಸೊಸೈಟಿಯಲ್ಲಿ ಅಡಮಾನ ಮಾಡಿದ್ದು ಅದನ್ನು ಪೋಲೀಸರು ಬಿಡಿಸಿಕೊಂಡು ಬಂದಿದ್ದು ಸದ್ರಿ ಚೈನನ್ನು ನ್ಯಾಯಾಲಯದಿಂದ ಚಾಸಾ-1 ರವರು ಪಡೆದುಕೊಂಡಿರುತ್ತಾರೆ.

ಪಾಟೀ ಸವಾಲುಃ ಶ್ರೀ ಬಿ ಆರ್ ಎನ್ ವಕೀಲರಿಂದಃ

2. ಸದ್ರಿ ಘಟನೆಯ ವಿಚಾರ ನನ್ನ ತಂದೆಯ ಕಡೆಯಿಂದ ನನಗೆ ತಿಳಿದಿರುತ್ತದೆ. ಚಾಸಾ-1 ರವರು ನಡೆಸುತ್ತಿರುವ ಅಂಗಡಿ ನಮ್ಮ ಮನೆಯಿಂದ ಸುಮಾರು ಅರ್ಧ ಕಿಮೀ ಅಂತರದಲ್ಲಿ ಇರುತ್ತದೆ. ಘಟನೆ ನಡೆದ ಸುಮಾರು 30 ರಿಂದ 45 ನಿಮಿಷಗಳ ನಂತರ ನನಗೆ ಚಾಸಾ1 ರವರು ಹೇಳಿದ ನಂತರ ಗೊತ್ತಾಯಿತು. ಆಗ ಸುಮಾರು ರಾತ್ರಿ 10 ಗಂಟೆಯ ಸಮಯವಾಗಿತ್ತು. ನನ್ನ ಹತ್ತಿರ ಮತ್ತು ನನ್ನ ತಂದೆಯ ಹತ್ತಿರ ಮೊಬೈಲ್ ಇದೆ ಎಂದರೆ ಸರಿ . ಸದ್ರಿ ಅಂಗಡಿಯ ಮುಂದೆ ಜನ ಸಂಚಾರ ಇದೆ ಎಂದರೆ ಸರಿ . ಅದೇ ರೀತಿ ಅಕ್ಕಪಕ್ಕದಲ್ಲಿ ವಾಸ್ತವ್ಯದ ಮನೆಗಳು ಇವೆ ಎಂದರೆ ಸರಿ . ಆಗ ನಾನು ಮೊದಲ ಬಾರಿಗೆ ನೋಡಿದ ತಕ್ಷಣ ನನ್ನ ತಂದೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಸದ್ರಿ ಆಸ್ಪತ್ರೆಯ ಹೆಸರು ಕುಸುಮಾಕರ ಶೆಟ್ಟಿ ಎನ್ನುವ ಒಂದು ಕ್ಲಿನಿಕ್ ಆಗಿತ್ತು . ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಸುಮಾರು 10-30 ಆಗಿರಬಹುದು. ಸದ್ರಿ ಆಸ್ಪತ್ರೆಯಿಂದ ಕೋಟಾ ಪೋಲೀಸ್ ಠಾಣೆಯು 3 ರಿಂದ 4 ಕಿಮೀ ದೂರ ಇರುತ್ತದೆ. ಚಾಸಾ-1 ರವರು ವೈದ್ಯರ ಬಳಿ ಯಾವ ಅರೀತಿ ತನಗೆ ಗಾಯವಾಯಿತು ಎಂಬುದರ ಬಗ್ಗೆ ಏನು ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ನನ್ನ ತಂದೆಯನ್ನು ಆಟೋರಿಕ್ಷಾದಲ್ಲಿ ಕರೆದುಕೊಂಡು ಹೋದೆನು ಸದ್ರಿ ಆಟೋವು ನನ್ನ ಅಣ್ಣನಾದ ಚಾಸಾ-3 ರವರಿಗೆ ಸೇರಿದ್ದಾಗಿರುತ್ತದೆ. ನನ್ನ ತಂದೆ ರಾತ್ರಿ ಮನೆಗೆ ಬಂದಾಗ ನಾನು ಮತ್ತು ಚಾಸಾ3 ರವರು ಇಬ್ಬರೂ ಮನೆಯಲ್ಲಿದ್ದೆವು . ಇಬ್ಬರಿಗೂ ನನ್ನ ತಂದೆ ಹೇಳಿದ ನಂತರವೇ ಘಟನೆಯ ಬಗ್ಗೆ ತಿಳಿದು ಬಂದಿರುತ್ತದೆ.

3. ನಮಗೆ ಘಟನೆಯ ಬಗ್ಗೆ ತಿಳಿದ ನಂತರ ನಾವು ನೇರವಾಗಿ ಠಾಣೆಗೆ ಹೋಗಿ ದೂರು ನೀಡಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸರಿ . ಸದ್ರಿ ಅಂಗಡಿಯ ಅಕ್ಕಪಕ್ಕದಲ್ಲಿರುವ ಮನೆಯವರಿಗೆ ಸದ್ರಿ ವಿಚಾರದ ಬಗ್ಗೆ ಗೊತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಹಾಗೆಯೇ

ನಾವು ಸದ್ರಿ ಸ್ಥಳಕ್ಕೆ ಬೇಟಿ ನೀಡಿಲ್ಲ ಮತ್ತು ಅಕ್ಕಪಕ್ಕದ ಜನರನ್ನು ವಿಚಾರಿಸಿಲ್ಲ ಎಂದರೆ ಸರಿ . ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಗಳಾದ ಸುನೀಲ್ ಮತ್ತು ಪ್ರಶಾಂತ್ ಎಂಬುವವರು ನನ್ನ ತಂದೆಗೆ ಹೇಗೆ ತಿಳಿದು ಬಂತು ಎಂಬುದರ ಬಗ್ಗೆ ನಾನು ಚಾಸಾ1 ರವರನ್ನು ಕೇಳಿರುವುದಿಲ್ಲ. ನಿಶಾನೆ ಪಿ-1 ನ್ನು ಪೋಲೀಸರೇ ಬರೆದಿರುತ್ತಾರೆ ಎಂದರೆ ಸರಿ . ಸದ್ರಿ ದೂರನ್ನು ನನ್ನ ತಂದೆಯೇ ಹೇಳಿದ್ದು ಅದನ್ನು ಪೋಲೀಸರು ಬರೆದಿರುತ್ತಾರೆ. ನಾನು ಪೋಲೀಸರು ಬರೆದಿರುವ ದೂರನ್ನು ಓದಲಿಲ್ಲ ಆದರೆ ನೋಡಿರುತ್ತೇನೆ. ಚಾಸಾ-1 ರವರು ದೂರು ನೀಡುವ ಸಂದರ್ಭದಲ್ಲಿ ಗುಮಾನಿಯ ಿಮೇಲೆ ಆರೋಪಿಗಳಾದ ಸುನೀಲ್ ಮತ್ತು ಪ್ರಶಾಂತ್ ರವರ ಹೆಸರುಗಳನ್ನು ಹೇಳಿದ್ದು ಸದ್ರಿ ವಿಚಾರವನ್ನು ನೀವು ತಿಳಿದುಕೊಂಡಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ಹೇಳಿರುತ್ತಾರೆ. ಸದ್ರಿ ವಿಚಾರವು ಆರೋಪಿಗಳನ್ನು ಪೋಲೀಸರು ದಸ್ತಗಿರಿ ಮಾಡಿದ ನಂತರ ಈ ಆರೋಪಿಗಳೇ ಚಾಸಾ-1 ರವರಿಂದ ಚೈನನ್ನು ಕಿತ್ತುಕೊಂಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಪೋಲೀಸರೇ ಸದ್ರಿ ಆರೋಪಿಗಳೇ ಚೈನನ್ನು ಕಿತ್ತುಕೊಂಡಿರುತ್ತಾರೆ ಎಂದು ನಮಗೆ ಹೇಳಿರುತ್ತಾರೆ ಎಂದರೆ ಸರಿ . ಘಟನೆ ನಡೆದು ಸುಮಾರು 4-5 ದಿನಗಳ ನಂತರ ಪೋಲೀಸರು ಆರೋಪಿಗಳನ್ನು ನಮಗೆ ತೋರಿಸಿರುತ್ತಾರೆ. ನಾನು ಠಾಣೆಯಲ್ಲಿ ಎಷ್ಟು ಸಹಿ ಮಾಡಿದ್ದೇನೆಂದು ಹೇಳಲುಬರುವುದಿಲ್ಲ. ನಾನು ಸಹಿ ಮಾಡುವ ಸಂದರ್ಭದಲ್ಲಿ ಚಾಸಾ-1 ಮತ್ತು 3 ರವರು ಹಾಜರಿದ್ದರು. ಸದ್ರಿ ಸಹಿಗಳನ್ನು ಆರೋಪಿಗಳನ್ನು ದಸ್ತಗಿರಿ ಮಾಡಿದ ದಿನದಂದು ನಾವು ಸಹಿಮಾಡಿರುತ್ತೇವೆ. ನಾನು ಮತ್ತು ಚಾಸಾ-1 ಮತ್ತು 3 ರವರು ಒಟ್ಟಿಗೆ ಹೋಗಿ ಠಾಣೆಯಲ್ಲಿ ಸಹಿ ಮಾಡಿರುತ್ತೇವೆ. ಪ್ರತ್ಯೇಕವಾಗಿ ನನ್ನ ತಂದೆ ಮತ್ತು ಚಾಸಾ-3 ರವರು ಕೊಟ್ಟಂತಹ ಮಾಹಿತಿಯ ಬಗ್ಗೆ ನನಗೆ ಅರಿವಿರುವುದಿಲ್ಲ. ನಾನು ಸಹಿ ಮಾಡಿದ ಹಾಳೆಯು ಬರೆದಿರುವಂತದಾಗಿದ್ದು ಸದ್ರಿ ಹಾಳೆಯಲ್ಲಿ ಏನುಬರೆದಿದೆ ಎಂದು ನನಗೆ ಗೊತ್ತಿಲ್ಲ. ಚಾಸಾ-12 ರವರು ನಮಗೆ ಪರಿಚಯಸ್ಥರು. ನಮ್ಮ ಚಿನ್ನವು ಸಿಕ್ಕಿದೆ ಎಂದು ಹೇಳಲಾದ ದಾಖಲೆಗೂ ಅದೇ ದಿನ ಸಹಿಯನ್ನು ನಾವು ಮೂರು ಜನ ಒಟ್ಟಿಗೆ

ಮಾಡಿರುತ್ತೇವೆ. ಹಾಗಾಗಿ ನಾಲ್ಕೈದು ದಿನಗಳ ನಂತರ ನಮ್ಮ ಚಿನ್ನದ ಚೈನು ಸಿಕ್ಕಿರುತ್ತದೆ ಎಂದರೆ ಸರಿ . ಚಿನ್ನದ ತೂಕ ಮತ್ತು ವಿನ್ಯಾಸದ ಬಗ್ಗೆ ಚಾಸಾ-1 ರವರು ತಮ್ಮ ದೂರಿನಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿಲ್ಲ. ನಾವು ಕಳೆದುಕೊಂಡ ಚಿನ್ನದ ಚೈನ ಮತ್ತು ಹಿಂದಿರುಗಿ ಪಡೆದುಕೊಂಡ ಚಿನ್ನದ ಚೈನಿನಲ್ಲಿ ಒಂದು ಪೀಸ್ ಕಟ್ಟಾಗಿರುತ್ತದೆ. ಆರೋಪಿಗಳು ಅಡಮಾನ ಇಟ್ಟ ವಿಚಾರವನ್ನು ಪೋಲೀಸರೇ ನಮಗೆ ತಿಳಿಸಿರುತ್ತಾರೆ ಮತ್ತು ಯಾರು ಸದ್ರಿ ಚೈನನ್ನು ಅಡಮಾನ ಇಟ್ಟದ್ದಾರೆ ಎಂದು ಗೊತ್ತಿಲ್ಲ. ನಾನು ನನ್ನ ತಂದೆಯ ಚಿನ್ನದ ಚೈನ ಕಳೆದಕೊಂಡಿದ್ದಾರೆ ಎಂದು ಹೇಳಿದ್ದರಿಂದ ಪೋಲೀಸರು ಹೇಳಿದಂತೆ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನುಚಾಸಾ-1 ರವರು ಹೇಳಿರುವಂತೆ ಸುನೀಲ್ ಮತ್ತು ಪ್ರಶಾಂತ್ ರವರು ಭಾಗಿಯಾಗಿದ್ದಾರೆ ಎಂದು ಹೇಳಿರುವುದಿಲ್ಲ ಆದರೂ ನಾನು ಸೃಷ್ಟಿಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯುಲ್ಲಿ ಹೇಳಿದಂತೆ ನನ್ನ ತಂದೆಯು 2 ಜನ ಆರೋಪಿಗಳ ಹೆಸರು ಹೇಳಿದ್ದು ಅದರಂತೆ ನ್ಯಾಯಾಲಯದ ಮುಂದೆ 3 ಜನ ಆರೋಪಿಗಳು ಹಾಜರಿರುತ್ತಾರೆ ಎಂದರೆ ಸರಿ . ಈ ಕೃತ್ಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಕೂಡ ನ್ಯಾಯಾಲಯದ ಮುಂದೆ ಪೋಲೀಸರ ಹೇಳಿಕೆಯಂತೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.